# ಗುರುಪೂರ್ಣಿಮಾ

**ಕುಮಾರಿ ಎಂ. ಶೆಟ್ಟಿ**

(ಜುಲೈ ೧೧ರಂದು ವ್ಯಾಸಪೂರ್ಣಿಮೆ ಅಥವಾ ಗುರುಪೂರ್ಣಿಮೆಯನ್ನು ಆಚರಿಸಲಾಗುತ್ತದೆ. ಗುರುವಿನ ಆವಶ್ಯಕತೆ ಹಾಗೂ ಮಹಿಮೆಯ ಬಗ್ಗೆ ಈ ಕಿರುಲೇಖನವನ್ನು ನೀಡಿರುವವರು ಮುಂಬೈ ನಗರದ ನಿವಾಸಿ.)

**ಆರ್ಯ** ಸಂಸ್ಕೃತಿಯ ಸನಾತನ ಧರ್ಮದ ವೈಶಿಷ್ಟ್ಯಪೂರ್ಣ ಹಬ್ಬ ಹರಿದಿನಗಳಲ್ಲಿ ಶ್ರೇಷ್ಠವಾದ ಪರ್ವದಿನವೆಂದರೆ ಗುರುಪೂರ್ಣಿಮೆ. ವ್ಯಾಸಪೂರ್ಣಿಮೆಯನ್ನೇ ಗುರುಪೂರ್ಣಿಮೆಯೆಂದು ಕರೆಯುತ್ತಾರೆ. ವೇದಗಳನ್ನು ವಿಂಗಡಿಸಿ ಮಾನವನ ಆಧ್ಯಾತ್ಮಿಕ ಅನ್ವೇಷಣೆಗೆ ನಿರ್ದಿಷ್ಟರೂಪ ನೀಡಿದ ವ್ಯಾಸರನ್ನೇ ಆದಿಗುರುವೆಂದೂ ಪರಿಗಣಿಸಲಾಗುತ್ತದೆ. ಗುರುಪೂರ್ಣಿಮೆಯಂದು ಗುರುವಿಗೆ ವಿಶೇಷ ನಮನ ಸಲ್ಲಿಸುವುದರೊಂದಿಗೆ ಸಾಧಿಸಬೇಕಾಗಿರುವ ಗುರಿಯತ್ತ ಪುನಶ್ಚೇತನಗೊಳ್ಳುವುದೂ ಮುಖ್ಯ. ಆದ್ದರಿಂದಲೇ ಚಾತುರ್ಮಾಸ್ಯದ ವ್ರತವನ್ನೂ ಈ ದಿವಸದಂದು ಪ್ರಾರಂಭಿಸುತ್ತಾರೆ. ಶಾಸ್ತ್ರಗಳ ವ್ಯಾಖ್ಯಾನವನ್ನು ಶ್ರವಣ, ಮನನ ಮಾಡುವುದರೊಂದಿಗೆ, ಒಂದೇ ಕಡೆಯಲ್ಲಿ ಉಳಿದು ಆತ್ಮಾವಲೋಕನ ಹಾಗೂ ಮನಸ್ಸಿನ ಸ್ಥಿರತೆಯನ್ನು ಸಾಧಿಸಬೇಕೆಂಬುದು ಈ ವ್ರತದ ಉದ್ದೇಶ. ವಿದೇಶಿಯರ ಆಗಮನದ ನಂತರ ಗುರುಶಿಷ್ಯ ಪರಂಪರೆ, ಗುರುಕುಲ ಪದ್ಧತಿ ನಾಶವಾಯಿತು. ವರ್ಗಪದ್ಧತಿ ಆರಂಭವಾಗಿ, ಗುಲಾಮಗಿರಿಗೆ ಅದು ಬುನಾದಿಯಾಯಿತು. ಆರ್ಷೇಯ ಸಂಸ್ಕೃತಿ ಅವಸಾನದತ್ತ ತಲುಪಿದಂತೆ ಸ್ವಾರ್ಥಪ್ರವೃತ್ತಿಯಿಂದ ಜನತೆಯನ್ನು ಮೋಸಗೊಳಿಸುವ ಗುರುಗಳು, ಹಣಕ್ಕಾಗಿ ವಿದ್ಯೆಯನ್ನು ಮಾರಾಟ ಮಾಡುವಂಥ ಗುರುಶಿಷ್ಯ ಸಂಬಂಧ ಪ್ರಾರಂಭವಾಗಿದ್ದು, ಪ್ರಾಚೀನ ಗುರು-ಶಿಷ್ಯ ಪರಂಪರೆಯ ವಿಶ್ವಾಸ, ಋಷಿ-ಮುನಿವಾಣಿ ಜನತೆಯಿಂದ ದೂರ ಸರಿಯಿತು.



ವೇದವ್ಯಾಸರ ವಿಗ್ರಹ

ಧರ್ಮಕ್ಕೆ ಗ್ಲಾನಿ ಬಂದಾಗ ಪರಮಾತ್ಮನು ಆವಿರ್ಭವಿಸಿ ಜನತೆಯನ್ನು ಸಂರಕ್ಷಿಸುವನು ಎಂಬ ಗೀತೆಯ ಶ್ಲೋಕಕ್ಕೆ ಅನುಗುಣವಾಗಿ ಸದ್ಗುರುವಿನ ಮೂಲಕ ಅವನೇ ಪ್ರತಿಯೊಬ್ಬ ವ್ಯಕ್ತಿಯಲ್ಲೂ ಆಧ್ಯಾತ್ಮಿಕ ಜಾಗೃತಿಯನ್ನು ಉಂಟುಮಾಡುವನು. ಗುರು ಈಶ್ವರ ಅಥವಾ ಪರತತ್ತ್ವದ ಅಂಶವೆಂಬುದನ್ನು ಮರೆಯುವಂತಿಲ್ಲ. ಆದ್ದರಿಂದಲೇ ಗುರುವೇ ಸಾಕ್ಷಾತ್ ಪರಬ್ರಹ್ಮವೆಂದೂ, ಬ್ರಹ್ಮ, ವಿಷ್ಣು, ಮಹೇಶ್ವರರಿಗೆ ಸಮನೆಂದೂ ಪ್ರಾರ್ಥಿಸುತ್ತೇವೆ.

ಭಾರತದ ಪ್ರಾಚೀನ ಗುರುಶಿಷ್ಯ ಪರಂಪರೆ ಜಗತ್ತನ್ನು ಸುಶೋಭಿತಗೊಳಿಸಿತ್ತು. ಭಾರತೀಯ ಋಷಿ, ಮುನಿ, ಗುರುಗಳು ತಪಶ್ಚರ್ಯದ ಬಲದಿಂದ ಅಧ್ಯಾತ್ಮ ವಿಜ್ಞಾನದಲ್ಲಿ ಮಹಾನ್ ಸಾಧನೆಯನ್ನು ಮಾಡಿದ್ದರು. ಭೌತಿಕ ವಿಜ್ಞಾನಿಗಳ ನಿಷ್ಕರ್ಷೆಗೆ ಸಿಗದಂತಹ ಅದ್ಭುತ ಜ್ಞಾನ-ವಿಜ್ಞಾನದ ಕಿರಣಗಳನ್ನು ಕಂಡುಕೊಂಡು ವಿಶ್ವಧರ್ಮ, ವಿಶ್ವಬಂಧುತ್ವಗಳನ್ನು ಇವರು ಏಕತ್ವದ ಅನುಭೂತಿಯ ಆಧಾರದ ಮೇಲೆ ಘೋಷಿಸಿದ್ದರು. ಭಾರತವು ಜಗದ್ಗುರು ಎಂಬ ಕೀರ್ತಿಯನ್ನು ಪಡೆದಿತ್ತು. ಗುರುಶಕ್ತಿಯಿಂದ ಪೋಷಿತವಾದ ಶಿಷ್ಯವರ್ಗ ಸಂಸ್ಕೃತಿಯ ಆಧಾರಸ್ತಂಭಗಳಾಗಿ ನಿಂತು ಜ್ಞಾನವನ್ನು ಜಗತ್ತಿನ ಉದ್ದಗಲಕ್ಕೂ ಪ್ರಸಾರ ಮಾಡಿದ್ದರು. ಫಾಹಿಯಾನ್, ಹುಯನ್‌ತ್ಸಾಂಗ್ ಮುಂತಾದವರು ಈ ದೇಶಕ್ಕೆ ಬಂದು ಇಲ್ಲಿನ ಜ್ಞಾನರಾಶಿಯ ಬಗ್ಗೆ ಮುಕ್ತಕಂಠದಿಂದ ಪ್ರಶಂಸಿಸುತ್ತಿದ್ದರು. ಗೌತಮ ಬುದ್ಧನ ಶಿಷ್ಯರು ವಿಶ್ವದಾದ್ಯಂತ ತತ್ತ್ವಪ್ರಚಾರ ಮಾಡಿದ್ದರು. ಸ್ವಾಮಿ ವಿವೇಕಾನಂದರು ಹೇಳುತ್ತಾರೆ, 'ನಮ್ಮ ಮಾತೃಭೂಮಿಗೆ ಪ್ರಪಂಚದ ಋಣ ಮಹತ್ತರವಾದುದು. ನೀವು ಎಲ್ಲ ದೇಶಗಳನ್ನು ಜನಾಂಗಗಳನ್ನು ಪರಿಶೀಲಿಸಿ ನೋಡಿದರೆ ಸಾಧುವಾದ ಹಿಂದೂವಿಗೆ, ಸಮಾಧಾನಿಯಾದ ಹಿಂದೂವಿಗೆ ದಕ್ಕಬೇಕಾಗಿರುವ ಋಣ ಬೇರೆಲ್ಲ ಜನಾಂಗಗಳಿಗಿಂತಲೂ ಹೆಚ್ಚು... ಮಾನವಕೋಟಿಗೆ ಆಧ್ಯಾತ್ಮಿಕ ಜ್ಯೋತಿಯನ್ನು ದಾನ ಮಾಡುವುದೇ ಭರತಖಂಡದ ಮುಖ್ಯ ಕರ್ತವ್ಯ. ಅವರ ಶಾಸ್ತ್ರದ

ಪಲ್ಲವಿಯೇ ಇದು. ಭರತಖಂಡ ಬದುಕಿರುವುದೇ ಇದಕ್ಕೆ. ಟಾರ್ಟರ್ ಅವರನ್ನು ಆಳಲಿ, ತುರ್ಕಿಯವರು ಅವರನ್ನು ಆಳಲಿ. ಭರತಖಂಡ ಮಾತ್ರ ತನ್ನ ಗುರಿಯಿಂದ ಸ್ವಲ್ಪವೂ ಅತ್ತ ಸರಿದಿಲ್ಲ."

ಶಿಷ್ಯನಾದವನು ಗುರುವಿನಲ್ಲಿ ಇಡುವ ವಿಶ್ವಾಸ, ಪ್ರೀತಿ, ಗೌರವ, ಶ್ರದ್ಧೆ, ಸಮರ್ಪಣಾ ಭಾವ, ನಿಃಸ್ವಾರ್ಥ ಸೇವಾಪ್ರವೃತ್ತಿ, ನಿಷ್ಕಲ್ಮಷ ಭಾವಗಳಿಗನುಗುಣವಾಗಿ ಗುರು ಕರುಣೆಯಿಂದ ತನ್ನ ಆಧ್ಯಾತ್ಮಿಕ ಶಕ್ತಿಯನ್ನು ಶಿಷ್ಯನಿಗೆ ಧಾರೆಯೆರೆಯುತ್ತಾನೆ. ಮಾತೆ ಬಾಲಕನನ್ನು ಪೋಷಿಸುವಂತೆ ಗುರುವು ತನ್ನ ಜ್ಞಾನವೆಲ್ಲವನ್ನೂ ಶಿಷ್ಯನಿಗೆ ವಾತ್ಸಲ್ಯದಿಂದ ಧಾರೆಯೆರೆದು ಅವನನ್ನು ಜಾಗೃತಗೊಳಿಸುತ್ತಾನೆ. ನಿಜವಾದ ಗುರುಶಿಷ್ಯರ ಸಂಬಂಧವನ್ನು ಕೇವಲ ಮಾತಿನಲ್ಲಿ ವರ್ಣಿಸಲು ಆಗುವುದಿಲ್ಲ. ಇದು ಹೃದಯದ ಸಂವೇದನೆ. ಶ್ರೀರಾಮಕೃಷ್ಣ ಪರಮ ಹಂಸರು ಮತ್ತು ಸ್ವಾಮಿ ವಿವೇಕಾನಂದರು; ಶ್ರೀಸಮರ್ಥ ರಾಮದಾಸರು ಮತ್ತೆ ಶಿವಾಜಿ, ಇಂತಹ ಹಲರಾರು ಗುರುಶಿಷ್ಯರ ಗಾಥೆಗಳು ನಮ್ಮ ಆರ್ಷೇಯ ಸಂಸ್ಕೃತಿಯ ಉದಾತ್ತ ಸಂಪ್ರದಾಯಕ್ಕೆ ಸಾಕ್ಷಿಯಾಗಿವೆ.

ಗುರು ಎಂಬ ಪದಕ್ಕೆ ಅನೇಕ ಅರ್ಥಗಳಿವೆ. ತಂದೆ, ಪೂಜನೀಯ ವ್ಯಕ್ತಿ, ಮಹತ್ತಿನ ವಸ್ತು ಅಥವಾ ವಿಷಯ ಹಾಗೂ ಘನತ್ವವನ್ನೂ ಈ ಪದ ಸೂಚಿಸುತ್ತದೆ. ಮಂತ್ರವನ್ನು ನೀಡುವುದರ ಮೂಲಕ, ಉಪದೇಶವನ್ನು ನೀಡುವುದರ ಮೂಲಕ ಶಿಷ್ಯನನ್ನು ಆಧ್ಯಾತ್ಮಿಕ ಮಾರ್ಗದಲ್ಲಿ ತೊಡಗಿಸುವವನೂ ಗುರು. ಒಂದು ಅರ್ಥದಲ್ಲಿ ಶಿಷ್ಯನ ಅಜ್ಞಾನವನ್ನು ಹೋಗಲಾಡಿಸಿ ನಿಜದ ತಿಳಿವನ್ನು ನೀಡುವವನೇ ಗುರು. ಪ್ರಾಪಂಚಿಕ ಮಟ್ಟದಿಂದ ಆಧ್ಯಾತ್ಮಿಕದೆತ್ತರಕ್ಕೆ ಎತ್ತಿ ಕರೆದೊಯ್ಯುವ ಶಕ್ತಿಯೇ ಗುರು. ಗುರುವಿನ ಕೃಪಾದೃಷ್ಟಿ ಶಿಷ್ಯನ ಮೇಲೆ ಬಿದ್ದಾಗ ಅಲ್ಲಿ ಮತ್ತೆ ಕತ್ತಲೆ, ಅಜ್ಞಾನ ಅಂಧಕಾರ ವಿರಲಾರದು. ವ್ಯಕ್ತಿಯ ಕುಸಂಸ್ಕಾರ, ಸುಸಂಸ್ಕಾರವಾಗುವುದು, ಕಷ್ಟಸಂಕಟಗಳ ಜೀವನ ಸುಗಮವಾಗುವುದು. ಹಾಗಾಗಿ ಜೀವನದಲ್ಲಿ ಪ್ರತಿಯೊಬ್ಬರಿಗೂ ಗುರು ಬೇಕೇ ಬೇಕು. **ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ** ಎಂದು ದಾಸರು ಸಾರಿದ್ದಾರೆ. ಲೌಕಿಕ ವಿದ್ಯೆಗಳನ್ನು ತಿಳಿಸುವ ಶಾಲೆಯ, ಕಾಲೇಜಿನ ಶಿಕ್ಷಕರೂ ಕೂಡ ಗುರುಗಳೇ. ನಾವು ಯಾರಿಂದ ಜ್ಞಾನವನ್ನು, ತಿಳಿವನ್ನು ಪಡೆಯುತ್ತೇವೋ ಅವರೆಲ್ಲ ನಮ್ಮ ಗುರುಗಳು. ಮಾನವನ ಜೀವನದಲ್ಲಿ ಗುರುವಿಲ್ಲದಿದ್ದರೆ ಏನು ತಾನೆ ಉಳಿದೀತು, ಏನು ತಾನೇ ತಿಳಿದೀತು?

ಗುರುತತ್ತ್ವವನ್ನು ಹೃದಯಾಂತರಾಳದಿಂದ ಧಾರಣೆ ಮಾಡಿದ ವ್ಯಕ್ತಿಯಲ್ಲಿ—ಅಂದರೆ, ಗುರುವಿನಲ್ಲಿ—ಸೇವಾಬುದ್ಧಿ, ಸೌಜನ್ಯ, ವಿನಯ, ಪ್ರಾಮಾಣಿಕತೆ, ಭಕ್ತಿ, ಶ್ರದ್ಧೆ, ಶ್ರಮ, ಸಂಯಮ, ತ್ಯಾಗಪೂರ್ಣ ಜೀವನಕ್ರಮ ರೂಪುತಾಳಿರಬೇಕು. ಈ ಗುಣಗಳು ಶಿಷ್ಯನಲ್ಲಿಯೂ ಕ್ರಮೇಣ ಮೈವೆತ್ತಿ ಅವನ ವ್ಯಕ್ತಿತ್ವವು ಶುದ್ಧವಾಗಿ, ಆತ್ಮಸಂಸ್ಕಾರಗೊಳ್ಳುವುದು. ಅವನ ಗುಣ, ಕರ್ಮ, ಸ್ವಭಾವಗಳಲ್ಲಿ ಅದ್ಭುತ ಪರಿವರ್ತನೆ ಉಂಟಾಗುವುದು. ಗುರುವಿನ ಮಹಿಮೆಯನ್ನು ಶಾಸ್ತ್ರಕಾರರು ಅನೇಕ ವಿಧಗಳಲ್ಲಿ ವರ್ಣಿಸಿರುವರು.

**ಚೈತನ್ಯಃ ಶಾಶ್ವತಃ ಶಾಂತೋ ವ್ಯೋಮಾತೀತೋ ನಿರಂಜನಃ ।**
**ಬಿಂದುನಾದಕಲಾತೀತಃ ತಸ್ಮೈ ಶ್ರೀಗುರವೇ ನಮಃ ॥**

"ಚೈತನ್ಯನೂ ಶಾಶ್ವತನೂ, ಶಾಂತನೂ, ಆಕಾಶವನ್ನೂ ಮೀರಿನಿಂತವನೂ, ದೋಷವಿಲ್ಲದವನೂ, ಬಿಂದು-ನಾದ-ಕಲೆಗಳಿಗೆ ಅತೀತನೂ ಆದ ಶ್ರೀಗುರುವಿಗೆ ನಮಸ್ಕಾರ." ಅಂತೆಯೇ—

**ಅಖಂಡಮಂಡಲಾಕಾರಂ ವ್ಯಾಪ್ತಂ ಯೇನ ಚರಾಚರಮ್ ।**
**ತತ್ಪದಂ ದರ್ಶಿತಂ ಯೇನ ತಸ್ಮೈ ಶ್ರೀಗುರವೇ ನಮಃ ॥**

"ಅಖಂಡವೂ, ಮಂಡಲಾಕಾರವುಳ್ಳದ್ದೂ ಆದ ಈ ಚರಾಚರ ಜಗತ್ತನ್ನು ವ್ಯಾಪಿಸಿರುವ ತತ್ತ್ವವು ಯಾರಿಂದ ತೋರಿಸಲ್ಪಟ್ಟಿತೋ ಅಂತಹ ಶ್ರೀಗುರುವಿಗೆ ನಮಸ್ಕಾರ." ಗುರುವು ಜನ್ಮ ಪಡೆದ ಸ್ಥಾನವು ತೀರ್ಥಕ್ಷೇತ್ರವೆಂದೇ ಪರಿಗಣಿಸಲ್ಪಡುತ್ತದೆ. ಅವರು ನಡೆದಾಡಿದ ಸ್ಥಳವು ಪಾವನ. ಗುರುವಿನ ಸಾನ್ನಿಧ್ಯವನ್ನು ನೆನಪು ಮಾಡಿಕೊಡುವ ಗುರುಪೂರ್ಣಿಮೆಯು ಶಿಷ್ಯನಿಗೆ ಶ್ರೇಷ್ಠ ದಿನ. ಶಿಷ್ಯನಲ್ಲಿ ಪರಿಪೂರ್ಣತೆಯನ್ನು ಉಂಟುಮಾಡಲಿಕ್ಕಾಗಿಯೇ ಗುರುವು ಶಿಷ್ಯನನ್ನು ಸಂಕಲ್ಪ ಬದ್ಧನಾಗಿಸುವನು. ಅವನಿಂದ ಪ್ರತಿಜ್ಞಾವಿಧಿಯನ್ನು ನೆರವೇರಿಸುವನು. ನಮ್ಮ ಪ್ರಾಚೀನ ಗುರು-ಶಿಷ್ಯ ಆಧ್ಯಾತ್ಮಿಕ ವಾಹಿನಿಯನ್ನು ಸ್ಮರಿಸಿ ಕೃತಜ್ಞತಾಪೂರ್ವಕವಾಗಿ ಗುರುವನ್ನು ನಮಿಸುತ್ತ ದೇವಸಂಸ್ಕೃತಿಯನ್ನು ಪುನರುತ್ಥಾನಗೊಳಿಸುವ, ದೇವ ಮಾನವರಾಗುವ ಕ್ರಿಯೆಗೆ ನಾವು ಇಂದೇ ನಾಂದಿ ಹಾಡುವಂತಾಗಲಿ. ✪

ಗುರು ದೊಡ್ಡ ಗಂಗಾನದಿಯಂತೆ. ಮನುಷ್ಯರು ಕಸವನ್ನೆಲ್ಲಾ ಗಂಗಾನದಿಗೆ ಎಸೆಯುವರು. ಆದರೆ ಇದರಿಂದ ಅದರ ಪಾವನತೆ ಕಡಮೆಯಾಗುವುದಿಲ್ಲ. ಇದರಂತೆಯೇ ಗುರು ಎಲ್ಲಾ ವಿಧದ ನೀಚ ಅಪಮಾನ ಮತ್ತು ನಿಂದೆಗಳಿಂದ ಮೇಲಿರುವನು.

ದೇವರಿಗೆ ಸಂಬಂಧಪಟ್ಟ ರಹಸ್ಯವನ್ನು ತಿಳಿಯಬೇಕೆಂದು ನೀನು ಅತಿಕಾತರನಾಗಿದ್ದರೆ, ಅವನು ನಿನಗೆ ಸದ್ಗುರುವನ್ನು ಕಳುಹಿಸುತ್ತಾನೆ. ಗುರುವನ್ನು ಹುಡುಕುವುದಕ್ಕೆ ನೀನು ತೊಂದರೆ ತೆಗೆದುಕೊಳ್ಳಬೇಕಾಗಿಲ್ಲ. – ಶ್ರೀರಾಮಕೃಷ್ಣರು